(ಇಂದು ದಿನಾಂಕ 07-04-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಪಿ.ಟಿ. ವಕೀಲರಿಂದಃ**

ನನ್ನ ಸ್ನೇಹಿತ ನಾಗೇಶ ಪಟಾಲಕರ್ ಮೂಲಕ ಆರೋಪಿಯ ಪರಿಚಯವಾಗಿದೆ. ನಾನು ಕಾರವಾರದ ಜೆ.ಎಂ.ಎಫ್.ಸಿ., ಮತ್ತು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಾಕಷ್ಟು ಖಾಸಗಿ ಫಿರ್ಯಾದಿಗಳನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು 3- 4 ಕೇಸನ್ನು ದಾಖಲಿಸಿದ್ದೇನೆ



ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಹಣವನ್ನು ಬೇರೆಯವರಿಗೆ ಸಾಲವಾಗಿ ಕೊಡಲು ಪರವಾನಿಗೆ ಪಡೆಯಬೇಕಾಗುತ್ತದೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಬಡ್ಡಿ ಇಲ್ಲದೇ ಹಣವನ್ನು ಸಾಲವಾಗಿ ಕೊಟ್ಟಿದ್ದೇನೆ. ನನ್ನ ಫಿರ್ಯಾದಿಯಲ್ಲಿ ಕೈಗಡ ಸಾಲ ಎಂದು ನಮೂದಿಸಿಲ್ಲ ಎಂದರೆ ಸರಿ. ಸದರಿ ಸಾಲಕ್ಕೆ ಎಷ್ಟು ಬಡ್ಡಿ ಹಣ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಬಡ್ಡಿ ಇಲ್ಲದೇ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಸಾಲ ಕೊಡುವಾಗ ಬಡ್ಡಿ ಹಾಕುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ರೂ. 1,20,000-00 ಗಳನ್ನು ನಗದು ರೂಪದಲ್ಲಿ ಕೊಟ್ಟಿದ್ದೇನೆ. ಸಾಮಾನ್ಯವಾಗಿ ರೂ. 20,000-00 ಮೇಲ್ಪಟ್ಟು ಹಣ ಕೊಡಬೇಕಾದರೆ ಚೆಕ್ ಅಥವಾ ಡಿಡಿ ಮೂಲಕ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ರೂ. 1,20,000-00 ಹಣವನ್ನು ಯಾರ ಸಮಕ್ಷಮ ಮತ್ತು ಎಲ್ಲಿ ಕೊಟ್ಟಿದ್ದೇನೆ ಎಂದು ಫಿರ್ಯಾದಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ನನ್ನ ಬಳಿ ಆರೋಪಿ ಯಾವುದೇ ಸಾಲವನ್ನು ಪಡೆದುಕೊಂಡಿಲ್ಲ ಅನ್ನುವುದು ಸರಿಯಲ್ಲ. ನಾಗೇಶ ಪಡಾಲಕರ್ ಇವರಿಗೆ ನಾನು ಸಾಕಷ್ಟು ಬಾರಿ ಹಣ ಕೊಟ್ಟಿದ್ದೇನೆ ಎಂದರೆ ಸರಿ. ನಾಗೇಶ ಪಡಾಲಕರ್ ಇವರಿಗೆ ಮೇಲಿಂದ ಮೇಲೆ ಹಣಕಾಸಿನ ತೊಂದರೆ ಇರುತ್ತದೆ ಎಂದರೆ ಸರಿಯಲ್ಲ. ನಾಗೇಶ ಪಡಾಲಕರ್ ಇವರು ಆರೋಪಿಯಿಂದ ಚೆಕ್ಕನ್ನು ಪಡೆದು ನನಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಅನ್ನುವುದು ಸರಿಯಲ್ಲ. ನಾನು ಯಾವತ್ತೂ ಕೂಡ ಆರೋಪಿಗೆ ಹಣ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ನನಗೆ ಯಾವುದೇ ಚೆಕ್ಕನ್ನು ನೀಡಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ಕಾನೂನುಬದ್ಧ ಹಣವನ್ನು ಕೊಡಲು ಬಾಧ್ಯಸ್ಥನಲ್ಲ ಅನ್ನುವುದು ಸರಿಯಲ್ಲ. ನಾಗೇಶ ಪಡಾಲಕರ ಇವರಿಗೆ ಹಣ ಕೊಡುವಾಗ

ಭದ್ರತೆಗಾಗಿ ಬೇರೆಯವರಿಂದ ಚೆಕ್ಕ ಕೊಡಬೇಕು ಎಂದು ನಾನು ಕೇಳಿ ಚೆಕ್ಕಗಳನ್ನು ಪಡೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನಾಗೇಶ ಪಡಾಲಕರ ಇವರನ್ನು ಈ ಕೇಸಿನಲ್ಲಿ ಸಾಕ್ಷಿ ಮಾಡಲು ತೊಂದರೆ ಇಲ್ಲ ಎಂದರೆ ಸಾಕ್ಷಿ



ಅವರು ಸದರಿ ಹಣಕ್ಕೆ ಜಾಮೀನುದಾರರು ಅಲ್ಲ ಎಂದು ಹೇಳುತ್ತಾರೆ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ